[redacted]

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1022

ಸದಸ್ಯರ ಹೆಸರು : ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಮಾನ್ಯ ಸಣ್ಣ ಕೈಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 19.12.2018.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ವಿವಿಧ ರೀತಿಯ ಸಣ್ಣ ಕೈಗಾರಿಕೆಗಳಾವುವು; ಆರ್ಥಿಕ ವಲಯಕ್ಕೆ ಅವುಗಳ ಕೊಡುಗೆ ಏನು; | ರಾಜ್ಯದಲ್ಲಿರುವ ವಿವಿಧ ರೀತಿಯ ಸಣ್ಣ ಕೈಗಾರಿಕೆಗಳ ವಿವರ ಕೆಳಗಿನಂತಿದೆ;<br>ಜನರಲ್ ಇಂಜಿನೀಯರಿಂಗ್, ಆಹಾರ ಉತ್ಪನ್ನ ತಯಾರಿಕೆ, ಮುದ್ರಣ, ಪ್ಲಾಸ್ಟಿಕ್ ಪ್ರಾಡಕ್ಟ್, ಚರ್ಮಗಾರಿಕೆ, ಕಟ್ಟಿಗೆ ಮತ್ತು ಸ್ಟೀಲ್ ಪೀಠೋಪಕರಣಗಳು, ಸಿದ್ಧ ಉಡುಪು ತಯಾರಿಕೆ, ಗ್ರಾನೈಟ್ ಕಟ್ಟಿಂಗ್ & ಪಾಲಿಶಿಂಗ್, ಆಟೋಮೊಬೈಲ್ಸ್, ಫ್ಯಾಬ್ರಿಕೇಷನ್ ವರ್ಕ್ಸ್, ಕಾಟನ್ ಜಿನ್ನಿಂಗ್, ಪ್ರೆಸ್ಸಿಂಗ್ ಮತ್ತು ಆಹಾರ ಸಂಸ್ಕರಣ ಘಟಕಗಳು ಇತ್ಯಾದಿ.<br>ಆರ್ಥಿಕ ವಲಯಕ್ಕೆ ಅವುಗಳ ಕೊಡುಗೆ;<br>• ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ 1,66,865 ಸಣ್ಣ ಕೈಗಾರಿಕಾ ಘಟಕಗಳು ನೋಂದಣಿಯಾಗಿದ್ದು, ರೂ. 27,020.38 ಕೋಟಿ ಬಂಡವಾಳ ಹೂಡಿಕೆಯೊಂದಿಗೆ 13,90,611 ಉದ್ಯೋಗವಕಾಶಗಳನ್ನು ನೀಡಿರುತ್ತವೆ.<br>• ಸಣ್ಣ ಕೈಗಾರಿಕೆ ಸ್ಥಾಪನೆಯಿಂದ ರಾಜ್ಯದ ಜಿ.ಡಿ.ಪಿ ಬೆಳವಣಿಗೆಗೆ ಉತ್ತಮ ಸಹಕಾರಿಯಾಗಿರುತ್ತದೆ.<br>• ಅನೇಕ ಸಣ್ಣ ಪ್ರಮಾಣದ ಕೈಗಾರಿಕೆಗಳು ಬೇರೆ ಬೇರೆ ದೇಶಗಳಿಗೆ ಉತ್ಪನ್ನಗಳು/ಸೇವೆಗಳನ್ನು ರಫ್ತು ಮಾಡುವುದರಿಂದ ವಿದೇಶಿ ವಿನಿಯಯ ಹೆಚ್ಚಾಗಿ ಆರ್ಥಿಕ ಅಭಿವೃದ್ಧಿ ಆಗುತ್ತಿದೆ. |
| ಆ) | ಬ್ಯಾಂಕುಗಳು, ಸಣ್ಣ ಕೈಗಾರಿಕೆದಾರರಿಗೆ ಅವಶ್ಯವಾದ ಸಾಲ–ಸೌಲಭ್ಯವನ್ನು ತೊಡಕುಗಳಿಲ್ಲದೆ ನೀಡುತ್ತಿವೆಯೇ; | ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಮಾರ್ಗಸೂಚಿಗಳನ್ವಯ ಅರ್ಹ ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಿ ಸಾಲ ಮಂಜೂರಾತಿಗಾಗಿ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಆದರೆ, ಬ್ಯಾಂಕುಗಳಲ್ಲಿ ಸಾಲ ಮಂಜೂರಾತಿಯನ್ನು ಬ್ಯಾಂಕಿಂಗ್ ನಿಯಮಗಳನ್ವಯ ನೀಡಲಾಗುತ್ತಿದ್ದು, ಹೆಚ್ಚುವರಿಯಾಗಿ ಅಗತ್ಯ ದಾಖಲಾತಿಗಳನ್ನು ಪಡೆಯಲಾಗುತ್ತಿದೆ. ಸದರಿ ದಾಖಲಾತಿಗಳನ್ನು ಒದಗಿಸಲು ಸಣ್ಣ ಕೈಗಾರಿಕೆದಾರರಿಗೆ ಹೆಚ್ಚಿನ ಸಮಯಾವಕಾಶ ಅಗತ್ಯವಿದ್ದು, ಸಾಲ ಮಂಜೂರಾತಿ ನೀಡುವಲ್ಲಿ ವಿಳಂಬವಾಗುತ್ತಿದ್ದು, ಸಾಲ |

| | | |
| --- | --- | --- |
| | | ಪಡೆಯುವಲ್ಲಿ ತೊಡಕಾಗುತ್ತಿದೆ.<br><br>ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಯುವ ಪೀಳಿಗೆಗಳು ಸಾಲ ಮಂಜೂರಾತಿಗಾಗಿ ಸಲ್ಲಿಸಿರುವ ಅರ್ಜಿಗಳ ಬಾಕಿ ಕುರಿತಂತೆ ತಾಲ್ಲೂಕು ಮಟ್ಟದಲ್ಲಿ ನಡೆಯುವ ಬ್ಲಾಕ್ ಲೆವೆಲ್ ಬ್ಯಾಂಕರ್ಸ್ ಕಮಿಟಿ (BLBC), ಜಿಲ್ಲಾ ಮಟ್ಟದಲ್ಲಿ ನಡೆಯುವ ಡಿಸ್ಟ್ರಿಕ್ಟ್ ಲೆವೆಲ್ ರಿವ್ಯೂ ಕಮಿಟಿ (DLRC) ಮತ್ತು ಡಿಸ್ಟ್ರಿಕ್ಟ್ ಕನ್ಸಲ್ಟೇಟಿವ್ ಕಮಿಟಿ (DCC) ರಾಜ್ಯ ಮಟ್ಟದಲ್ಲಿ ನಡೆಯುವ ಸ್ಟೇಟ್ ಲೆವೆಲ್ ಬ್ಯಾಂಕರ್ಸ್ ಸಬ್ ಕಮಿಟಿ, ಸ್ಟೇಟ್ ಲೆವೆಲ್ ಬ್ಯಾಂಕರ್ಸ್ ಕಮಿಟಿ (SLBC) ಸಭೆಗಳಲ್ಲಿ ಬಾಕಿಯಿರುವ ಅರ್ಜಿಗಳನ್ನು ವಿಲೇ ಮಾಡುವಂತೆ ನಿರ್ದೇಶನ ನೀಡಲಾಗುತ್ತಿದೆ. |
| ಇ) | ಕೈಗಾರಿಕೆಗಳಿಗೆ ಅವಶ್ಯವಾದ ವಿದ್ಯುತ್, ಕಚ್ಚಾ ಸಾಮಗ್ರಿಗಳು ಹಾಗೂ ಕಾರ್ಮಿಕರ ಲಭ್ಯತೆ ಸೂಕ್ತವಾಗಿದೆಯೇ; | ಕೈಗಾರಿಕೆಗಳಿಗೆ ಅವಶ್ಯವಾದ ವಿದ್ಯುತ್‌ನ್ನು ಇಂಧನ ಇಲಾಖೆಯಿಂದ ಮಂಜೂರು ಮಾಡಲಾಗುತ್ತಿದೆ. ಕಚ್ಚಾ ಸಾಮಗ್ರಿಗಳನ್ನು ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಕೈಗಾರಿಕೆಗಳಿಗೆ ಅವಶ್ಯವಿರುವ ಕಚ್ಚಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಕೈಗಾರಿಕೆಗಳಿಗೆ ಅವಶ್ಯವಿರುವ ಕಾರ್ಮಿಕರ ಲಭ್ಯತೆ ಸೂಕ್ತವಾಗಿರುತ್ತದೆ. |
| ಈ) | ಸಣ್ಣ ಕೈಗಾರಿಕಾ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲಾಗಿದೆಯೇ; ಇವುಗಳಿಂದ ಎಷ್ಟು ಮಂದಿಗೆ ಉದ್ಯೋಗಾವಕಾಶ ಲಭಿಸಿದೆ; ಪುರುಷರು ಹಾಗೂ ಮಹಿಳೆಯರ ಸಂಖ್ಯೆ ಎಷ್ಟು? (ಕೇಂದ್ರದ-ರಾಜ್ಯದ ಅನುದಾನದ ಬಗ್ಗೆ ಮಾಹಿತಿ ನೀಡುವುದು) | ಸಣ್ಣ ಕೈಗಾರಿಕಾ ಉತ್ಪನ್ನಗಳಿಗೆ ಕೆಳಕಂಡ ಸಂಸ್ಥೆಗಳಿಂದ ಮಾರುಕಟ್ಟೆ ಸೌಲಭ್ಯ ಒದಗಿಸಲಾಗುತ್ತಿದೆ.<br>1. ಜಿಲ್ಲಾ ಸರಬರಾಜು ಮತ್ತು ಮಾರುಕಟ್ಟೆ ಸಂಸ್ಥೆ (ಡಿಎಸ್ಎಂಎಸ್)<br>2. ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದಿಂದ ರಾಜ್ಯದ ಕಸುಬುದಾರರು ಹಾಗೂ ಸಣ್ಣ ಕೈಗಾರಿಕಾ ಪ್ರತಿನಿಧಿಗಳನ್ನು ಸ್ಥಳೀಯ, ರಾಜ್ಯಮಟ್ಟದ ಹಾಗೂ ಅಂತರ್ ರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಒದಗಿಸುತ್ತಿದೆ. ಪ್ರತಿ ವರ್ಷ 200 ರಿಂದ 300 ಕಸುಬುದಾರರು ಹಾಗೂ ಕೈಗಾರಿಕೆಗಳನ್ನು ನಿಯೋಜಿಸಲಾಗುತ್ತಿದೆ. ಈ ಪೈಕಿ 100 ರಿಂದ 150 ಮಹಿಳೆಯರು ಇರುತ್ತಾರೆ.<br>3. ಕರ್ನಾಟಕ ಸರ್ಕಾರದಿಂದ 2018-19ನೇ ಸಾಲಿನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ 97 ಖಾದಿ ಸಂಘ ಸಂಸ್ಥೆಗಳಿಗೆ ರೂ. 1275.00 ಲಕ್ಷಗಳ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಬಿಡುಗಡೆ ಮಾಡಲಾಗಿದೆ. ಖಾದಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಖಾದಿ ಮೇಳಗಳನ್ನು ಆಯೋಜಿಸಲಾಗುತ್ತಿದೆ.<br><br>ಕಳೆದ ಐದು ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳು 13,90,611 ಉದ್ಯೋಗವಕಾಶಗಳನ್ನು ನೀಡಿರುತ್ತವೆ. |

| | | |
|---|---|---|
| | | ಕರ್ನಾಟಕ ಸರ್ಕಾರದಿಂದ 2018-19ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿಗೆ ಮಾರುಕಟ್ಟೆ ಅಭಿವೃದ್ಧಿಗಾಗಿ ರೂ. 300.00 ಲಕ್ಷ ರಾಜ್ಯದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಅನುದಾನ ಹಾಗೂ ರೂ. 100.00 ಲಕ್ಷಗಳ ಕೇಂದ್ರದ ಪಾಲಿನ ಎಂ.ಡಿ.ಎ ಅನುದಾನ ಬಿಡುಗಡೆ ಮಾಡಲಾಗಿದೆ. |

**ಸಿಐ 133 ಸಿಎಸ್‌ಸಿ 2018**

[ಎಸ್.ಆರ್. ಶ್ರೀನಿವಾಸ್ (ವಾಸು)]
ಸಣ್ಣ ಕೈಗಾರಿಕೆ ಸಚಿವರು ಹಾಗೂ
ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವರು